**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಇಂಡಿ</u>**

**ಕ್ರಿ.ಮಿ. ನಂ:348/2020**

**ಆರ್ ಡಬ್ಲ್ಯೂ-3**

**ದಿ: 02-08-2024 ರ ಮೇರೆಗೆ ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ: ಎಸ್.ಎಲ್.ಬಿ. ವಕೀಲರಿಂದ:</u>**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನಾನೇ ಹೇಳಿ ಬರೆಸಿದ್ದು, ಅದರಲ್ಲಿರುವ ವಿಷಯಗಳು ನಿಜ ಮತ್ತು ಸತ್ಯ ಇರುತ್ತದೆ, ಅದನ್ನು ಓದಿ ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು: ಅರ್ಜಿದಾರರ ಪರವಾಗಿ ಶ್ರೀ. ಜೆಡ.ಬಿ.ಬಿ. ವಕೀಲರಿಂದಃ**

ಎದುರುದಾರನ ತಾಯಿ ಮತ್ತು ನನ್ನ ಹೆಂಡತಿ ಅಕ್ಕ ತಂಗಿಯರು ಆಗಬೇಕು. ದಿನಾಂಕಃ 20.10.2008 ರಂದು ಸಿಂದಗಿಯಲ್ಲಿ ಒಂದನೇ ಅರ್ಜಿದಾರಳ ಮತ್ತು ಎದುರುದಾರನ ವಿವಾಹ ಆಗಿರುತ್ತದೆ. ಒಂದನೇ ಅರ್ಜಿದಾರಳ ಮತ್ತು ಎದುರುದಾರನ ಮಗನ ಹೆಸರು ಮಹಮ್ಮದ ಹುಜೇಪಾ ಅಂತಾ ಇರುತ್ತದೆ. ಎರಡನೇ  ಅರ್ಜಿದಾರನ ಜನನ ದಿನಾಂಕ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಒಂದನೇ ಅರ್ಜಿದಾರಳು ಮದುವೆಯ ನಂತರ ಎದುರುದಾರನಿಗೆ ಸುಮಾರು 6-7 ತಿಂಗಳು ಮಾತ್ರ ಕೂಡಿ ಇದ್ದು ಆ ನಂತರ ಯಾವುದೇ ಕಾರಣ ಇಲ್ಲದೇ ತನ್ನ ತವರು ಮನೆಗೆ ಹೊರಟು ಹೋಗಿರುತ್ತಾಳೆ ಅಂತಾ ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಮದುವೆಯ ನಂತರ ಒಂದನೇ ಅರ್ಜಿದಾರಳು ಮತ್ತು ಎದುರುದಾರ ಬೆಂಗಳೂರಿನಲ್ಲಿ ವಾಸವಾಗಿದ್ದರು ಎಂದರೆ ಸರಿ. ನಾನು ಜೇವರಗಿ ಕೆ. ಗ್ರಾಮದ ಖಾಯಂ ವಾಸಿ ಎಂದರೆ ಸರಿ. ಬೆಂಗಳೂರಿನಲ್ಲಿ ಎದುರುದಾರನಿಗೆ ಒಂದು ಸ್ವಂತ ಮನೆ ಮತ್ತು ಎರಡು ಕಾರು ಇರುತ್ತವೆ ಎಂದರೆ ಸರಿಯಲ್ಲ. ಎರಡು ಕಾರುಗಳಲ್ಲಿ ಒಂದನ್ನು ಎದುರುದಾರ ಬಳಸುತ್ತಿದ್ದು ಇನ್ನೊಂದನ್ನು ಕಂಪನಿಗೆ ಬಾಡಿಗೆ ನೀಡಿದ್ದು ಅದರಿಂದ ತಿಂಗಳಿಗೆ 60 ರಿಂದ 80 ಸಾವಿರ

ಆದಾಯ ಎದುರುದಾರನಿಗೆ ಇರುತ್ತದೆ ಎಂದರೆ ಸರಿಯಲ್ಲ. ಜೇವರಗಿ ಕೆ. ಗ್ರಾಮದಲ್ಲಿ ಇರುವ ಮನೆ ಬಾಡಿಗೆಯಿಂದ ಮತ್ತು ಕೃಷಿ ಜಮೀನಿನಿಂದ ಎದುರುದಾರನಿಗೆ ಸಾಕಷ್ಟು ಆದಾಯ ಇರುತ್ತದೆ ಎಂದರೆ ಸರಿಯಲ್ಲ. ಒಂದನೇ ಅರ್ಜಿದಾರಳು ಎದುರುದಾರನೊಂದಿಗೆ ಚೆನ್ನಾಗಿ ಬಾಳ್ವೆ ಮಾಡುತ್ತಿದ್ದರು ಸಹ ಎದುರುದಾರನು ಇನ್ನೊಂದು ಮದುವೆ ಮಾಡಿಕೊಂಡು ಒಂದನೇ ಅರ್ಜಿದಾರಳನ್ನು ತನ್ನ ಮನೆಯಿಂದ ಹೊರಹಾಕಿರುತ್ತಾನೆ ಎಂದರೆ ಸರಿಯಲ್ಲ. ಎದುರುದಾರ ನನ್ನ ಹೆಂಡತಿಯ ತಂಗಿಯ ಮಗನಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಸಹಿ/-**

**ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.ಇಂಡಿ.**

**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಇಂಡಿ</u>**

**ಕ್ರಿ.ಮಿ. ನಂ:348/2020**

**ಆರ್ ಡಬ್ಲ್ಯೂ-2**

**ದಿ: 02-08-2024 ರ ಮೇರೆಗೆ ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ: ಎಸ್.ಎಲ್.ಬಿ. ವಕೀಲರಿಂದ:</u>**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನಾನೇ ಹೇಳಿ ಬರೆಸಿದ್ದು, ಅದರಲ್ಲಿರುವ ವಿಷಯಗಳು ನಿಜ ಮತ್ತು ಸತ್ಯ ಇರುತ್ತದೆ, ಅದನ್ನು ಓದಿ ತಿಳಿದುಕೊಂಡು ನಾನು ಸಹಿ ಮಾಡಿರುತ್ತೆನೆ.

**ಪಾಟೀ ಸವಾಲು: ಅರ್ಜಿದಾರರ ಪರವಾಗಿ ಶ್ರೀ. ಜೆಡ.ಬಿ.ಬಿ. ವಕೀಲರಿಂದಃ**

ಎದುರುದಾರ ನನ್ನ ಅಣ್ಣನ ಮಗ. ನಾನು ಜೇವರಗಿ ಕೆ. ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ಎದುರುದಾರ ಬೆಂಗಳೂರಿಗೆ ಹೋಗುವಕ್ಕಿಂತ ಮುಂಚೆ ಜೇವರಗಿ ಕೆ. ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿ. ಎದುರುದಾರರಿಗೆ ಜೇವರಗಿ ಕೆ. ಗ್ರಾಮದಲ್ಲಿ ಜಮೀನು, ಮನೆ ಮತ್ತು ಪ್ಲಾಟ ಇರುತ್ತವೆ ಎಂದರೆ ಸರಿಯಲ್ಲ. ಆತನ ತಂದೆ ಹೆಸರಿಗೆ ಇರುತ್ತವೆ ಎಂದರೆ ಸರಿಯಲ್ಲ. ಮಹಮ್ಮದ ಸೂಫಿ ತಂದೆ ಮಹಮ್ಮದ ಹುಸೇನ ಎದುರುದಾರನ ತಂದೆ ಎಂದರೆ ಸರಿ. ದಿನಾಂಕಃ 20.10.2008 ರಂದು ಸಿಂದಗಿಯಲ್ಲಿ ಒಂದನೇ ಅರ್ಜಿದಾರಳ ಮತ್ತು ಎದುರುದಾರನ ವಿವಾಹ ಆಗಿರುತ್ತದೆ. ಎದುರುದಾರನಿಗೆ ಇಂಡಿ ಮತ್ತು ಸಾಲೋಟಗಿ ಗ್ರಾಮದಲ್ಲಿ ಅರ್ಜಿದಾರಳ ತವರು ಮನೆಯವರನ್ನು ಬಿಟ್ಟು ಬೇರೆ ಯಾರು ಸಂಬಂಧಿಕರು ಇಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಒಂದನೇ ಅರ್ಜಿದಾರಳು ಎದುರುದಾರ ನೊಂದಿಗೆ 6-7 ತಿಂಗಳು ಮಾತ್ರ ಜೀವನ ಸಾಗಿಸಿ ನಂತರ ಯಾವುದೇ ಕಾರಣ ಇಲ್ಲದೇ ಎದುರುದಾರನನ್ನು ತೊರೆದು ತನ್ನ ತವರು ಮನೆಗೆ ಹೊರಟು ಹೋಗಿರುತ್ತಾಳೆ ಅಂತಾ ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರ ಒಂದನೇ ಅರ್ಜಿದಾರಳನ್ನು

ಮರಳಿ ಕರೆದುಕೊಂಡು ಹೋಗಲು ಸಾಕಷ್ಟು ಪ್ರಯತ್ನ ಮಾಡಿದರೂ ಸಹ ಒಂದನೇ ಅರ್ಜಿದಾರಳು ಎದುರುದಾರನಿಗೆ ಮರಳಿ ಬಂದಿರುವುದಿಲ್ಲ ಅಂತಾ ಹೇಳಿ ಖೊಟ್ಟಿಯಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಒಂದನೇ ಅರ್ಜಿದಾರಳು ಮತ್ತು ಎದುರುದಾರನ ವಿವಾದ ಬಗೆಹರಿಸಲು ಕೂಡಿದ ನ್ಯಾಯ ಪಂಚಾಯತಿಗೆ ನಾನು ಎದುರುದಾರ, ಅಬ್ದುಲ ರಜಾಕ, ಮಹಮ್ಮದ ಚಾಂದಪಾಶಾ, ಮಹಮ್ಮದ ಸೂಫಿ, ಮಹಮ್ಮದ ಹನೀಫ ಎಲ್ಲರೂ ಬಂದಿದ್ದರು. ಮೇಲೆ ಹೇಳಿದ ನಾವೆಲ್ಲ ಜನ ನ್ಯಾಯ ಪಂಚಾಯತಿಗೆ ಬಂದಿದ್ದೇವು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಎದುರುದಾರನಿಗೆ ಬೆಂಗಳೂರಿನಲ್ಲಿ ಒಂದು ಮನೆ ಎರಡು ಕಾರು ಇದ್ದು, ಅವುಗಳ ಪೈಕಿ ಒಂದನ್ನು ಎದುರುದಾರ ಉಪಯೋಗಿಸುತ್ತಿದ್ದು ಇನ್ನೊಂದನ್ನು ಕಂಪನಿಗೆ ಬಾಡಿಗೆ ನೀಡಿದ್ದು ಎದುರುದಾರನಿಗೆ ತಿಂಗಳಿಗೆ ರೂ. 60 ರಿಂದ 80 ಸಾವಿರ ಆದಾಯ ಇರುತ್ತದೆ ಎಂದರೆ ಸರಿಯಲ್ಲ. ಜೇವರಗಿ ಕೆ. ಗ್ರಾಮದಲ್ಲಿ ಇರುವ ಜಮೀನಿನಿಂದ ಎದುರುದಾರನಿಗೆ ಸಾಕಷ್ಟು ಆದಾಯ ಇರುತ್ತದೆ ಎಂದರೆ ಸರಿಯಲ್ಲ. ಎದುರುದಾರನಿಗೆ ಸಾಕಷ್ಟು ಉತ್ಪನ್ನ ಇದ್ದರೂ ಸಹ ಇಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರ ನನ್ನ ಅಣ್ಣನ ಮಗ ಇದ್ದುದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಸಹಿ/–**

**ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.ಇಂಡಿ.**

**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಇಂಡಿ</u>**

**ಕ್ರಿ.ಮಿ. ನಂ:348/2020**

**ಆರ್ ಡಬ್ಲ್ಯೂ-1**

**ದಿ: 02-08-2024 ರ ಮೇರೆಗೆ ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಮುಂದುವರೆದ ಪಾಟೀ ಸವಾಲು: ಅರ್ಜಿದಾರರ ಪರವಾಗಿ ಶ್ರೀ. ಜೆಡ.ಬಿ.ಬಿ. ವಕೀಲರಿಂದಃ**

ಸಾಮಾನ್ಯವಾಗಿ ಜಮಾತನಲ್ಲಿ ಯಾವುದಾದರೂ ಸಮಸ್ಯೆ ತೆಗೆದುಕೊಂಡು ಹೋದಲ್ಲಿ ಎರಡು ಪಕ್ಷಗಾರರಿಗೆ ನೋಟಿಸು ನೀಡಿ ದಿನಾಂಕ ನಿಗದಿಪಡಿಸಿಸುತ್ತಾರೆ ಎಂದರೆ ಸಾಕ್ಷಿ ನೋಟಿಸು ಕೊಡುವುದು ಬಿಡುವುದು ಅವರಿಗೆ ಸೇರಿದ್ದು ಅಂತಾ ನುಡಿಯುತ್ತಾರೆ. ದಿನಾಂಕಃ 23.06.2010 ರಂದು ನಿ.ಡಿ. 29 ನ್ನು ನೀಡಿದ್ದರು. ಜಮಾತನವರು ದಿನಾಂಕ ನಿಗದಿಪಡಿಸಿ ನನಗೆ ಯಾವುದೇ ನೋಟಿಸು ನೀಡಿರುವುದಿಲ್ಲ. ಜಮಾತನವರು ನನಗೆ ಮೌಖಿಕವಾಗಿ ಕರೆದು ವಿಷಯ ತಿಳಿಸಿದ್ದರು. ನೋಟಿಸು ನೀಡಿದ 2 ರಿಂದ 3 ತಿಂಗಳು ವ 5 ತಿಂಗಳು ನಂತರ ಕರೆದಿರುತ್ತಾರೆ ಅಂತಾ ನುಡಿಯುತ್ತಾರೆ. ಸಾಕ್ಷಿ ಮುಂದುವರೆದ ಜಮಾತನವರು ಕಾಲಾವಕಾಶ ಕೋಡಿ ಇನ್ನೊಂದು ಪಕ್ಷಗಾರರನ್ನು ಕರೆದು ಮಾತನಾಡುತ್ತೇವೆ ಅಂತಾ ಸಾಕ್ಷಿ ನುಡಿಯುತ್ತಾರೆ. ಸದರಿ ಜಮಾತನ ಪ್ರೇಸಿಡೆಂಟ ಮತ್ತು ಸೆಕ್ರೆಟರಿಯ ಹೆಸರು ಗೊತ್ತಿಲ್ಲ. ಜಮಾತನವರು ನನ್ನನ್ನು ಮೌಖಿಕವಾಗಿ ಕರೆದು ವಿಷಯ ತಿಳಿಸಿ ಇನ್ನೊಂದು ಪಕ್ಷಗಾರರನ್ನು ಕರೆಯಿಸುತ್ತೇನೆ ಅಂತಾ ಸಮಯಾವಕಾಶ ತೆಗೆದುಕೊಂಡಿದ್ದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಂಡಿ ತಾಲೂಕಿನಲ್ಲಿ ಅರ್ಜಿದಾರರನ್ನು ಹೊರತುಪಡಿಸಿ ನನಗೆ ಬೇರೆ ಸಂಬಂಧಿಕರು ಇಲ್ಲ ಅಂದರೆ ಸರಿ. ನನ್ನ ಬಳಿ ಯಾವುದೇ ದಾಖಲೆ ಇಲ್ಲದ ಕಾರಣ ದಾಖಲೆಗಳನ್ನು ಸೃಷ್ಟಿಸುವುದಕ್ಕಾಗಿ ಮತ್ತು ಅರ್ಜಿದಾರರನ್ನು ಮರಳಿ ಕರೆದುಕೊಂಡು ಹೋಗುವ ಇಚ್ಛೆ ಇರದೇ ಜಮಾತನವರಿಗೆ ಖೊಟ್ಟಿ ಅರ್ಜಿಯನ್ನು ಸಲ್ಲಿಸಿ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರನ್ನು ಮರಳಿ ಕರೆದುಕೊಂಡು ಹೋಗುವ ಇಚ್ಛೆ ಹೊಂದಿಲ್ಲ ಆದರೂ

ಸಹ ಜಮಾತನವರಿಗೆ ಖೊಟ್ಟಿಯಾಗಿ ಅರ್ಜಿ ಸಲ್ಲಿಸಿ ಅರ್ಜಿದಾರಳನ್ನು ಮರಳಿ ಕರೆದುಕೊಂಡು ಹೋಗುತ್ತೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅರ್ಜಿದಾರರಿಗೆ ಜೀವನಾಂಶ ಕೋಡುವುದನ್ನು ತಪ್ಪಿಸುವುದಕ್ಕಾಗಿ ಅರ್ಜಿದಾರಳನ್ನು ಮರಳಿ ಕರೆದುಕೊಂಡು ಹೋಗುತ್ತೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಸಹಿ/–**

**ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.ಇಂಡಿ.**